ಓ.ಎಸ್. 17/2015
ಪಿ.ಡಬ್ಲ್ಯೂ-1

ದಿನಾಂಕಃ **18.11.2025** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ **2** ರಿಂದ **4** ನೇ ಪ್ರತಿವಾದಿ ಪರ ಶ್ರೀ ಎಸ್.ಆರ್.ಆರ್. ವಕೀಲರಿಂದಃ</u>

ನನ್ನ ತಾತನ ಹೆಸರು ನಂಜುಂಡಪ್ಪ ಎಂದರೆ ಸರಿ. ನನ್ನ ಅಜ್ಜಿಯ ಹೆಸರು ಗಂಗಮ್ಮ ಎಂದರೆ ಸರಿ. ನನ್ನ ತಾತನ ತಂದೆಯ ಹೆಸರು ನನಗೆ ಗೊತ್ತಿರುವುದಿಲ್ಲ. ನನ್ನ ತಾತ ಮೂಲತಃ ಆಂಧ್ರ ಪ್ರದೇಶ ರಾಜ್ಯದ ಮುಕ್ಕಡಂನ ಹಳ್ಳಿ ಗ್ರಾಮದ ನಿವಾಸಿ. ನನ್ನ ತಾತನ ಅಣ್ಣ-ತಮ್ಮಂದಿರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ತಾತ ನಂಜುಂಡಪ್ಪನವರಿಗೆ ಅವರ ತಂದೆಯಿಂದ ಬಂದಂತಹ ಆಸ್ತಿಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ.

**2.** ನಿಮ್ಮ ತಾತ ನಂಜುಂಡಪ್ಪನವರಿಗೆ ಯಾವುದೇ ಆಸ್ತಿ ಇರಲಿಲ್ಲ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ನನ್ನ ತಾತ ನಂಜುಂಡಪ್ಪನವರಿಗೆ ಹೊಸಕೆರೆ ಗ್ರಾಮದ ಸರ್ವೆ ನಂ. 49 ರಲ್ಲಿ 1 ಎಕರೆ 24 ಗುಂಟೆ ಜಮೀನು ಮತ್ತು ಸರ್ಕಾರಕ್ಕೆ ಸ್ವಾಧೀನಪಡಿಸಿಕೊಂಡ 2 ಎಕರೆ ಜಮೀನು ಇತ್ತು ಆದರೆ ಅದರ ಸರ್ವೆ ನಂಬರ್ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನನ್ನ ತಾತನಿಗೆ ಸೇರಿದ ಜಮೀನು ಸರ್ಕಾರ ಸ್ವಾಧೀನ ಪಡಿಸಿಕೊಂಡಿರುವುದಕ್ಕೆ ಸಂಬಂಧಿಸಿದಂತೆ ದಾಖಲೆಗಳು ಇರುತ್ತವೆ, ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ.

**3.** ಹೊಸಕೆರೆ ಗ್ರಾಮದ ಸರ್ವೆ ನಂ. 49 ರಲ್ಲಿನ 1 ಎಕರೆ 24 ಗುಂಟೆ ಜಮೀನು ನನ್ನ ತಾತನಿಗೆ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ತಾತನ ಹೆಸರಿನಲ್ಲಿ ಮೂಲ ಕಂದಾಯ ದಾಖಲೆಗಳು ಇರುತ್ತವೋ, ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಾತ ನಂಜುಂಡಪ್ಪನವರನ್ನು ನಾನು ನೋಡಿರುತ್ತೇನೆ. ಅವರು ಸುಮಾರು 18 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ತಾತ ತೀರಿಕೊಳ್ಳುವ ವೇಳೆಗೆ ನಾನು ಪ್ರಾಪ್ತ ವಯಸ್ಕನಾಗಿದ್ದೆನು. ನಾನು ಪ್ರಾಪ್ತ ವಯಸ್ಕನಾದ ನಂತರ ಆದ ನಮ್ಮ ಕುಟುಂಬದ ವಿಚಾರಗಳ ಬಗ್ಗೆ ನನಗೆ ಗೊತ್ತಿರುತ್ತದೆ.

**4.** ನನ್ನ ತಾತ ತೀರಿಕೊಂಡ ನಂತರ ಹೊಸಕೆರೆ ಗ್ರಾಮದ ಸರ್ವೆ ನಂ. 49 ರ ಖಾತೆ ನನ್ನ ತಂದೆ ಪರಮೇಶ್ವರಪ್ಪ ಮತ್ತು ನನ್ನ ಚಿಕ್ಕಪ್ಪ ಬಸವರಾಜಪ್ಪನವರ ಹೆಸರಿಗೆ ವರ್ಗಾವಣೆಯಾಗಿರುತ್ತದೆ. ನನ್ನ ತಂದೆ ಮತ್ತು ಚಿಕ್ಕಪ್ಪನ ಹೆಸರಿಗೆ ಖಾತೆ ವರ್ಗಾವಣೆಯಾಗಿರುವ ಮ್ಯುಟೇಷನ್ ಆದೇಶವನ್ನು ಪಡೆದುಕೊಂಡಿರುವುದಿಲ್ಲ. ನಿಮ್ಮ ತಾತ ಜೀವಂತವಾಗಿದ್ದಾಗ ನೀವೆಲ್ಲರೂ ಒಂದೇ ಮನೆಯಲ್ಲಿ ವಾಸವಾಗಿದ್ದಿರೆ ಅಥವಾ ಬೇರೆ-ಬೇರೆ ವಾಸವಾಗಿದ್ದಿರೆ ಎಂದು ಪ್ರಶ್ನಿಸಿದ್ದಕ್ಕೆ ಎಲ್ಲರೂ ಒಟ್ಟು ಕುಟಂಬದಲ್ಲಿ ವಾಸವಾಗಿದ್ದೆವು ಎಂದು ಉತ್ತರಿಸಿರುತ್ತಾರೆ. ನನ್ನ ತಾತ, ನನ್ನ ತಂದೆ ಮತ್ತು ಚಿಕ್ಕಪ್ಪ ಒಂದೇ ಮನೆಯಲ್ಲಿ ವಾಸವಾಗಿದ್ದರು ಎಂಬುದಕ್ಕೆ ದಾಖಲೆಗಳು ಇರುತ್ತವೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ.

**5.** ದಾವಾ ಸ್ವತ್ತುಗಳು ನಿಮ್ಮ ತಾತ ನಂಜುಂಡಪ್ಪನವರು ಸಂಪಾದನೆ ಮಾಡಿದ ಆಸ್ತಿಗಳಾಗಿರುವುದಿಲ್ಲ ಮತ್ತು ದಾವಾ ಸ್ವತ್ತುಗಳಲ್ಲಿ ಅವರಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಒಟ್ಟು ಕುಟುಂಬದ ಆಸ್ತಿಗಳು ಎಂದು ಉತ್ತರಿಸಿರುತ್ತಾರೆ. ದಾವಾ ಸ್ವತ್ತುಗಳು ನನ್ನ ತಾತ ನಂಜುಂಡಪ್ಪ ಮತ್ತು ಅವರ ಮಕ್ಕಳ ಒಟ್ಟು ಕುಟುಂಬಕ್ಕೆ ಸೇರಿರುತ್ತವೆ ಎಂಬುದಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇವೆ.

**6.** ನಿಮ್ಮ ಅಜ್ಜಿ ಗಂಗಮ್ಮನವರಿಗೆ ರುದ್ರಮ್ಮ ಎಂಬ ಅಕ್ಕ ಇದ್ದರು ಎಂದರೆ ಗೊತ್ತಿರುವುದಿಲ್ಲ. ರುದ್ರಮ್ಮನವರ ಗಂಡ ಮಲ್ಲಪ್ಪ ಮತ್ತು ಅವರ ಮಗ ಮಲ್ಲೇಶಪ್ಪರವರ ಬಗ್ಗೆ ನಿಮಗೆ ಮಾಹಿತಿ ಇರುತ್ತದೆಯೇ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ಮಲ್ಲೇಶಪ್ಪನವರ ಬಗ್ಗೆ ಗೊತ್ತಿರುತ್ತದೆ ಅವರು

ನನ್ನ ಅಜ್ಜಿಯ ಅಕ್ಕ ಅಥವಾ ತಂಗಿಯ ಮಗ ಇರಬಹುದು, ಅವರೂ ಸಹ ನನಗೆ ಚಿಕ್ಕಪ್ಪ ಆಗುತ್ತಾರೆ ಎಂದು ಉತ್ತರಿಸಿರುತ್ತಾರೆ. ನಾನು ಮಲ್ಲೇಶಪ್ಪನವರನ್ನು ನೋಡಿರುತ್ತೇನೆ. ಮಲ್ಲೇಶಪ್ಪನವರ ತಂದೆ ಮಲ್ಲಪ್ಪನವರನ್ನು ನೋಡಿರುವುದಿಲ್ಲ. ಮಲ್ಲೇಶಪ್ಪ ಸುಮಾರು 15 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಮಲ್ಲೇಶಪ್ಪನವರ ತಾಯಿಯ ಹೆಸರು ರುದ್ರಮ್ಮ ಎಂದರೆ ಸರಿ. ಸದರಿ ರುದ್ರಮ್ಮ ಮತ್ತು ನನ್ನ ಅಜ್ಜಿ ಗಂಗಮ್ಮ ಅಕ್ಕ-ತಂಗಿಯರು ಎಂದರೆ ಸರಿ.

**7.** ದಾವಾ 1 ನೇ ಆಸ್ತಿ ನಿಮ್ಮ ಅಜ್ಜಿ ಗಂಗಮ್ಮನವರ ಅಕ್ಕ ರುದ್ರಮ್ಮನವರ ಸ್ವಯಾರ್ಜಿತ ಸ್ವತ್ತು ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಈ ದಾವೆಯನ್ನು ಹೂಡುವ ಪೂರ್ವದಲ್ಲಿ ದಾವಾ 1 ನೇ ಆಸ್ತಿ ಮೂಲತಃ ಯಾರಿಗೆ ಸೇರಿತ್ತು ಎಂದು ನಾನು ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ದಿಃ29.03.1965 ರಲ್ಲಿ ರುದ್ರಮ್ಮ ದಾವಾ 1 ನೇ ಆಸ್ತಿ , ಹೊಸಕೆರೆ ಗ್ರಾಮದ ಸರ್ವೆ ನಂ. 139 ಮತ್ತು ಒಂದು ಮನೆಯನ್ನು ನಿಮ್ಮ ಅಜ್ಜಿ ಗಂಗಮ್ಮನವರಿಗೆ ದಾನವಾಗಿ ನೀಡಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. 1965 ರ ಪೂರ್ವದಲ್ಲಿ ದಾವಾ 1 ನೇ ಸ್ವತ್ತಿನ ಖಾತೆ ರುದ್ರಮ್ಮನವರ ಹೆಸರಿನಲ್ಲಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. 1965 ರಿಂದ 2005-06 ನೇ ಸಾಲಿನವರೆಗೆ ದಾವಾ 1 ನೇ ಸ್ವತ್ತಿನ ಖಾತೆ ಗಂಗಮ್ಮನವರ ಹೆಸರಿನಲ್ಲಿತ್ತು ಎಂದರೆ ಸರಿ. ಗಂಗಮ್ಮನವರ ಮರಣಾನಂತರ ದಾವಾ 1 ನೇ ಆಸ್ತಿ 1 ಮತ್ತು 5 ನೇ ಪ್ರತಿವಾದಿಗಳಿಗೆ ಬಂದಿರುತ್ತದೆ ಎಂದರೆ ಸರಿ. ಗಂಗಮ್ಮನವರಿಂದ 1 ಮತ್ತು 5 ನೇ ಪ್ರತಿವಾದಿಗಳಿಗೆ ಬಂದಿದ್ದಂತಹ ದಾವಾ 1 ನೇ ಆಸ್ತಿ, ಸರ್ವೆ ನಂ. 139 ಮತ್ತು ಮನೆಯನ್ನು 2006-07 ನೇ ಸಾಲಿನಲ್ಲಿ ಮೌಖಿಕವಾಗಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ವಿಭಾಗದಂತೆ ಎಂ.ಆರ್. 29/2011-12 ರಂತೆ

ಖಾತೆ ವರ್ಗಾವಣೆಯಾಗಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ವಿಭಾಗದಲ್ಲಿ ದಾವಾ 1 ನೇ ಆಸ್ತಿ 1 ನೇ ಪ್ರತಿವಾದಿಯ ಪಾಲಿಗೆ ಬಂದಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ.

**8.** ಗಂಗಮ್ಮ ತೀರಿಕೊಳ್ಳುವವರೆಗೂ ಗಂಗಮ್ಮನವರಿಗೆ ಸೇರಿದಂತಹ ದಾವಾ 1 ನೇ ಆಸ್ತಿ , ಹೊಸಕೆರೆ ಗ್ರಾಮದ ಸರ್ವೆ ನಂ. 139 ಮತ್ತು ಮನೆಯನ್ನು ಹೊರತು ಪಡಿಸಿ ನಿಮ್ಮ ಕುಟುಂಬಕ್ಕೆ ಯಾವುದೇ ಪಿತ್ರಾರ್ಜಿತ ಆಸ್ತಿಗಳು ಇರಲಿಲ್ಲ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಸಾಕ್ಷಿ ಮುಂದುವರೆದು ಆದರೆ ನಮ್ಮ ಕುಟುಂಬಕ್ಕೆ ಸರ್ವೆ ನಂ. 10/1 ರಲ್ಲಿ 1 ಎಕರೆ 4 ಗುಂಟೆ, ಮನೆ ನಂ. 255, ನಿವೇಶನ ಸಂಖ್ಯೆ118 ರಲ್ಲಿ ಆಸ್ತಿಗಳು ಇದ್ದವು ಎಂದು ಉತ್ತರಿಸಿರುತ್ತಾರೆ.

**9.** ದಿನಾಂಕ 29.03.1965 ರ ದಾನ ಪತ್ರದಡಿಯಲ್ಲಿ ಬಂದಂತಹ ಆಸ್ತಿಗಳಲ್ಲಿ ಗಂಗಮ್ಮ ಅವರ ಜೀವಿತಾವಧಿಯಲ್ಲಿ ಅವರೇ ಸ್ವಾಧೀನದಲ್ಲಿದ್ದುಕೊಂಡು ಆದಾಯವನ್ನು ಅವರೇ ಪಡೆದುಕೊಳ್ಳುತ್ತಿದ್ದರು ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬಕ್ಕೆ ಕೊಡುತ್ತಿದ್ದರು ಎಂದು ಉತ್ತರಿಸಿರುತ್ತಾರೆ.

**10.** ನಿಮ್ಮ ತಂದೆ ಅವರ ಮದುವೆಯಾಗುವ ಪೂರ್ವದಿಂದಲೂ ಹೊಸಕೆರೆ ಗ್ರಾಮದಲ್ಲಿ ಪೆಟ್ಟಿಗೆ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದರು ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ವ್ಯಾಪಾರ ಮಾಡುತ್ತಿದ್ದರು ಆದರೆ ಪೆಟ್ಟಿಗೆ ಅಂಗಡಿಯ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನನ್ನ ತಂದೆ ಮದುವೆಯ ಪೂರ್ವದಲ್ಲಿ ಮುಕ್ಕಡಂನ ಹಳ್ಳಿಯಲ್ಲಿ ವಾಸವಾಗಿದ್ದರು ವ್ಯಾಪಾರಕ್ಕಾಗಿ ಹೊಸಕೆರೆಗೆ ಬಂದಿರುತ್ತಾರೆ ಎಂದು ಸೂಚಿಸುವುದು

ಸರಿಯಲ್ಲ. ಸಾಕ್ಷಿಯು ಮುಂದುವರೆದು ಹೊಸಕೆರೆಯಲ್ಲಿಯೇ ವಾಸವಾಗಿದ್ದರು ಎಂದು ಉತ್ತರಿಸಿರುತ್ತಾರೆ.

**11.** ನನ್ನ ತಂದೆ ಮತ್ತು ತಾತನಿಗೆ ಯಾವುದೇ ಆಸ್ತಿ ಇಲ್ಲದ ಕಾರಣ ನನ್ನ ತಂದೆ ಪೆಟ್ಟಿಗೆ ಅಂಗಡಿಯನ್ನು ಹಾಕಿಕೊಂಡು ವ್ಯಾಪರ ಮಾಡಲು ಪ್ರಾರಂಭಿಸಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದಲ್ಲಿ ಎಲ್ಲರೂ ಸೇರಿಕೊಂಡು ಮಾಡಿರುತ್ತಾರೆ. ನನ್ನ ತಾತನೇ ಅಂಗಡಿ ಮಾಡಿಕೊಟ್ಟಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನನ್ನ ತಂದೆ ಯಾರ ಸಹಾಯವೂ ಇಲ್ಲದೇ ಒಬ್ಬರೇ ಮುಕ್ಕಡಂನಹಳ್ಳಿ ಗ್ರಾಮದಿಂದ ಹೊಸಕೆರೆಗೆ ಗ್ರಾಮಕ್ಕೆ ವಲಸೆ ಬಂದು ವ್ಯಾಪಾರ ಮಾಡುತ್ತಿದ್ದರು ಎಂದು ಸೂಚಿಸುವುದು ಸರಿಯಲ್ಲ. ನನ್ನ ತಂದೆ ಹೊಸಕೆರೆಯಲ್ಲಿ ಪೆಟ್ಟಿಗೆ ಅಂಗಡಿಯನ್ನು ಪ್ರಾರಂಭಿಸಿದಾಗ ನನ್ನ ತಾತ ಅಥವಾ ಅಜ್ಜಿ ನನ್ನ ತಂದೆಗೆ ಯಾವುದೇ ಸಹಾಯ ಮಾಡಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನನ್ನ ತಂದೆ ಪೆಟ್ಟಿಗೆ ಅಂಗಡಿಯನ್ನು ಪ್ರಾರಂಭಿಸಲು ಅವರೇ ಸ್ವತಃ ಕೂಲಿ ಮಾಡಿ ಹಣ ಸಂಪಾದನೆ ಮಾಡಿಕೊಂಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

**12.** ನನ್ನ ತಂದೆ ಹೊಸಕೆರೆಗೆ ಬಂದ ನಂತರ ಅವರೇ ನಿಮ್ಮ ತಾಯಿಯನ್ನು ಮದುವೆ ಮಾಡಿಕೊಂಡಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ನನ್ನ ಅಜ್ಜಿ ತಾತ ನೋಡಿ ಮದುವೆ ಮಾಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. 1 ನೇ ಪ್ರತಿವಾದಿಗೆ ನನ್ನ ಅಜ್ಜಿ ತಾತ ಸೇರಿ ಮದುವೆ ಮಾಡಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ

ತಂದೆಯ ತಂಗಿಯನ್ನು ನನ್ನ ತಾಯಿಯ ಮನೆಗೆ ಕೊಟ್ಟು ವಿವಾಹ ಮಾಡಿ ಅಲ್ಲಿಂದ ನಮ್ಮ ತಾಯಿಯನ್ನು ನನ್ನ ತಂದೆಗೆ ಮದುವೆ ಮಾಡಿಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ.

**13.** ನಿಮ್ಮ ತಂದೆ ಮತ್ತು ತಾಯಿ ಇಬ್ಬರೂ ಕಷ್ಟಪಟ್ಟು ಸಂಪಾದನೆ ಮಾಡುತ್ತಿದ್ದರು ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಸರಿ ಎಂದು ಉತ್ತರಿಸಿ, ಎಲ್ಲರೂ ಒಟ್ಟು ಕುಟುಂಬದಲ್ಲಿದ್ದು ದುಡಿದು ಸಂಪಾದನೆ ಮಾಡುತ್ತಿದ್ದರು ಎಂದು ಉತ್ತರಿಸಿರುತ್ತಾರೆ. 1 ನೇ ಪ್ರತಿವಾದಿ ಮತ್ತು 5 ನೇ ಪ್ರತಿವಾದಿಯ ಕುಟುಂಬಗಳು ಬೇರೆ ಬೇರೆಯಾಗಿ ವಾಸವಾಗಿದ್ದರು ಎಂದು ಸೂಚಿಸುವುದು ಸರಿಯಲ್ಲ.

**14.** ನಾನು ಡಿಪ್ಲೋಮೋ ಫಾರ್ಮಸಿ ಪದವೀಧರನಾಗಿರುತ್ತೇನೆ. ನನ್ನ ವಿದ್ಯಾಭ್ಯಾಸ 2012 ರಲ್ಲಿ ಮುಗಿದಿರುತ್ತದೆ. ನನ್ನ ವಿದ್ಯಾಭ್ಯಾಸದ ಎಲ್ಲಾ ಖರ್ಚು ವೆಚ್ಚಗಳನ್ನು ನನ್ನ ತಂದೆ-ತಾಯಿ ನೋಡಿಕೊಂಡಿರುತ್ತಾರೆ. ನಾನು 2006 ರಿಂದ ದುಡಿಯಲು ಪ್ರಾರಂಭಿಸಿರುತ್ತೇನೆ. 2006 ರಲ್ಲಿ ನಾನು ಮಧುಗಿರಿಯ ಲಕ್ಷ್ಮೀ ಮೆಡಿಕಲ್ಸ್‌ನಲ್ಲಿ ಕೆಲಸಕ್ಕೆ ಸೇರಿಕೊಂಡಿರುತ್ತೇನೆ. 2006 ರವರೆಗೆ ನನಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿ. 2006 ರ ಪೂರ್ವದಲ್ಲಿ ನಾನು ದುಡಿದು ಯಾವುದೇ ಹಣವನ್ನು ನನ್ನ ತಂದೆ-ತಾಯಿಗೆ ನೀಡಿರುವುದಿಲ್ಲ ಎಂದರೆ ಸರಿ.

**15.** ನನ್ನ ಸಂಪಾದನೆ ನನ್ನ ಹೆಂಡತಿ ಮಕ್ಕ ಳ ಜೀವನಕ್ಕೆ ಸಾಕಾಗುತ್ತಿರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. ದಾವಾ 3 ನೇ ಆಸ್ತಿಯನ್ನು ನನ್ನ ತಾಯಿ ಪುಟ್ಟಮ್ಮ 4 ನೇ ಪ್ರತಿವಾದಿ ದಿ:10.08.1978 ರಂದು ಸ್ವಯಾರ್ಜಿತವಾಗಿ ಖರೀದಿಸಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ದಾವಾ 5 ನೇ ಆಸ್ತಿಯನ್ನು 4 ನೇ ಪ್ರತಿವಾದಿ ದಿನಾಂಕ 17.07.1998 ರಲ್ಲಿ ಅವರ ಸ್ವಂತ ದುಡಿಮೆಯಿಂದ

ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ 4 ನೇ ಆಸ್ತಿಯನ್ನು 4 ನೇ ಪ್ರತಿವಾದಿ ದಿನಾಂಕ 01.08.2003 ರಲ್ಲಿ ಅವರ ಸ್ವಂತ ದುಡಿಮೆಯಿಂದ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ಜನ್ಮ ದಿನಾಂಕ 06.06.1976. ದಿನಾಂಕ 10.08.1978 , ದಿನಾಂಕ 17.07.1998 ಮತ್ತು ದಿನಾಂಕ 01.08.2003 ರ ಕ್ರಯ ಪತ್ರಗಳಡಿಯಲ್ಲಿ ದಾವಾ 3 ರಿಂದ 5 ನೇ ಆಸ್ತಿಗಳನ್ನು ಖರೀದಿ ಮಾಡಲು ನಾನು ಯಾವುದೇ ಹಣದ ಸಹಾಯ ಮಾಡಿರುವುದಿಲ್ಲ ಎಂದರೆ ಸರಿ.

**16.** ದಾವಾ 2 ನೇ ಆಸ್ತಿಯನ್ನು 1 ನೇ ಪ್ರತಿವಾದಿ ದಿನಾಂಕ 06.08.1999 ರಂದು ಅವರ ಸ್ವಂತ ದುಡಿಮೆಯಿಂದ ಖರೀದಿ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ದಾವಾ 6 ನೇ ಆಸ್ತಿಯನ್ನು 1 ನೇ ಪ್ರತಿವಾದಿ ದಿನಾಂಕ 01.02.1996 ರಂದು ಅವರ ಸ್ವಂತ ದುಡಿಮೆಯಿಂದ ಖರೀದಿ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತುಗಳು ನನ್ನ ಪಿತ್ರಾರ್ಜಿತ ಆಸ್ತಿಗಳಾಗಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

(ಈ ಹಂತದಲ್ಲಿ 2 ರಿಂದ 4 ನೇ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ